# ಪೂರ್ಣಚಂದ್ರ ತೇಜಸ್ವಿ ಅವರ ಮಂತ್ರಮಾಂಗಲ್ಯ: ಒಂದು ಸಾಮಾಜಿಕ, ಆರ್ಥಿಕ ಹಾಗೂ ಧಾರ್ಮಿಕ ಕ್ರಾಂತಿಯ ಸಮಾಜಶಾಸ್ತ್ರೀಯ ಅವಲೋಕನ

**ಮದನ್ ಕುಮಾರ್***

**DOI: https://doi.org/10.5281/zenodo.22300827**

**ABSTRACT**

ರಾಷ್ಟ್ರಕವಿ ಕುವೆಂಪು ಅವರು ರೂಪಿಸಿದ ಪ್ರಗತಿಪರ ಮತ್ತು ಸರಳ ವಿವಾಹ ಪದ್ಧತಿಯಾದ 'ಮಂತ್ರ ಮಾಂಗಲ್ಯ'ದ ಸಾಮಾಜಿಕ, ಆರ್ಥಿಕ ಮತ್ತು ವೈಚಾರಿಕ ಆಯಾಮಗಳನ್ನು ಈ ಸಂಶೋಧನಾ ಪ್ರಬಂಧವು ಸಮಾಜಶಾಸ್ತ್ರೀಯ ಚೌಕಟ್ಟಿನೊಳಗೆ ವಿಶ್ಲೇಷಣಾತ್ಮಕವಾಗಿ ಪರಿಶೀಲಿಸುತ್ತದೆ. ಸಮಕಾಲೀನ ಕಾಲಘಟ್ಟದಲ್ಲಿ, ಮದುವೆಗಳು ಕೇವಲ ವೈಯಕ್ತಿಕ ಮೈಲಿಗಲ್ಲುಗಳಾಗಿ ಉಳಿಯದೆ ಆಡಂಬರದ, ಮಾರುಕಟ್ಟೆ-ಚಾಲಿತ ಕಾರ್ಯಕ್ರಮಗಳಾಗಿ ಬದಲಾಗಿದ್ದು, ಕುಟುಂಬಗಳ ಮೇಲೆ ತೀವ್ರವಾದ ಆರ್ಥಿಕ ಮತ್ತು ಸಾಲದ ಹೊರೆಯನ್ನು ವಿಧಿಸುತ್ತಿವೆ. ಈ ಹಿನ್ನೆಲೆಯಲ್ಲಿ, ೧೯೬೬ರಲ್ಲಿ ಪ್ರಸಿದ್ಧ ಲೇಖಕ ಪೂರ್ಣಚಂದ್ರ ತೇಜಸ್ವಿ ಅವರ ವಿವಾಹದ ಮೂಲಕ ಐತಿಹಾಸಿಕ ಮತ್ತು ಪ್ರಾಯೋಗಿಕ ಮಹತ್ವವನ್ನು ಪಡೆದುಕೊಂಡ 'ಮಂತ್ರ ಮಾಂಗಲ್ಯ' ಪದ್ಧತಿಯು, ಸಾಂಸ್ಥಿಕ ಪುರೋಹಿತಶಾಹಿ, ವರದಕ್ಷಿಣೆ ಮತ್ತು ಸಜಾತೀಯ ವಿವಾಹದ (ಒಂದೇ ಜಾತಿಯೊಳಗೆ ಮದುವೆಯಾಗುವ) ಕಟ್ಟುನಿಟ್ಟಿನ ವ್ಯವಸ್ಥೆಗಳನ್ನು ಹೇಗೆ ಯಶಸ್ವಿಯಾಗಿ ಮುರಿದಿದೆ ಎಂಬುದನ್ನು ಈ ಅಧ್ಯಯನವು ಚರ್ಚಿಸುತ್ತದೆ. ದ್ವಿತೀಯಕ ಸಂಶೋಧನಾ ದತ್ತಾಂಶಗಳನ್ನು (Secondary research data) ಬಳಸಿಕೊಂಡು, ಡಿಜಿಟಲ್ ಯುಗದಲ್ಲಿ ಇಂದಿನ ವೈಚಾರಿಕ ಯುವಜನರಲ್ಲಿ ಈ ಸಮಾನತೆಯ ವಿವಾಹ ಪದ್ಧತಿಯ ಮರುಹುಟ್ಟು ಮತ್ತು ಅಳವಡಿಕೆಯನ್ನು, ಸಾಮಾಜಿಕ ಜಾಲತಾಣಗಳ ದೃಶ್ಯ ಪುರಾವೆಗಳ ಬೆಂಬಲದೊಂದಿಗೆ ಈ ಪ್ರಬಂಧವು ಅನ್ವೇಷಿಸುತ್ತದೆ. ಅಂತಿಮವಾಗಿ, ಪ್ರಗತಿಪರ, ಮೂಢನಂಬಿಕೆ-ಮುಕ್ತ ಮತ್ತು ಲಿಂಗ-

* **ಮದನ್ ಕುಮಾರ್,** ಉಪನ್ಯಾಸಕರು (ಅರೆಕಾಲಿಕ), ಕನ್ನಡ ವಿಭಾಗ, ಬ್ಲೂ ಬೆಲ್ ಪಿಯು ಕಾಲೇಜು, ಬ್ಯಾಡರಹಳ್ಳಿ, ಬೆಂಗಳೂರು.

ಸಮಾನ ಸಮಾಜವನ್ನು ನಿರ್ಮಿಸಲು 'ಮಂತ್ರ ಮಾಂಗಲ್ಯ'ವು ಅತ್ಯಗತ್ಯ ಮತ್ತು ಹೆಚ್ಚು ಪ್ರಸ್ತುತವಾದ ಪರ್ಯಾಯ ಮಾರ್ಗವಾಗಿ ಉಳಿದಿದೆ ಎಂಬುದನ್ನು ಈ ಅಧ್ಯಯನವು ಒತ್ತಿಹೇಳುತ್ತದೆ.

**KEYWORDS:** ಮಂತ್ರ ಮಾಂಗಲ್ಯ, ಕುವೆಂಪು, ಪೂರ್ಣಚಂದ್ರ ತೇಜಸ್ವಿ, ಸರಳ ವಿವಾಹ, ವೈಚಾರಿಕತೆ, ಸಾಮಾಜಿಕ ಕ್ರಾಂತಿ, ಲಿಂಗ ಸಮಾನತೆ.

**ಪೀಠಿಕೆ:**

ಮದುವೆ ಎಂಬುದು ಎಲ್ಲರ ಬದುಕಿನಲ್ಲಿ ಒಂದು ರೀತಿಯ ವಿಶೇಷ ದಿನ ಮತ್ತು ಘಟನೆ. ಬಡವರಿಂದ ಹಿಡಿದು ಶ್ರೀಮಂತರವರೆಗೆ ಆ ದಿನವನ್ನು ಬಹಳ ಸಾಂಪ್ರದಾಯಿಕವಾಗಿ ತಮ್ಮದೇ ಪಂಗಡಗಳ ಧಾರ್ಮಿಕ ವಿಧಿ ವಿಧಾನಗಳ ಮೂಲಕ ನಡೆಸುವುದು ಸಾಮಾನ್ಯ ಹಾಗೂ ಅವೆಲ್ಲವೂ ಒಳಜಾತಿ ಮದುವೆಗಳು. ಎಲ್ಲಾ ವರ್ಗಗಳ ಶೇಕಡಾ ತೊಂಬತ್ತರಷ್ಟು ವಿವಾಹಗಳು ಅತಿಯಾದ ವಿಜೃಂಭಣೆಯಿಂದ ನಡೆಯುತ್ತಿವೆ. ಮದುವೆಯ ಜಗಮಗಿಸುವಿಕೆಗೆ ಮಾರುಹೋಗಿ ಜನರು ತಮ್ಮ ಜೀವಮಾನದ ಸಂಪಾದನೆಯನ್ನು ಖರ್ಚು ಮಾಡುತ್ತಾರೆ ಅಥವಾ ಸಾಲದ ಸುಳಿಗೆ ಸಿಲುಕುತ್ತಾರೆ. ಹೀಗಾಗಿ ಇಂದಿನ ವಿವಾಹಗಳು ಕೇವಲ ಸಂಬಂಧಗಳನ್ನು ಬೆಸೆಯುವ ಕಾರ್ಯಕ್ರಮವಾಗಿರದೆ, ಸಾಲದ ಹೊರೆ ಹೊರಿಸುವ ವೇದಿಕೆಯಾಗುತ್ತಿವೆ. ಈ ಎಲ್ಲಾ ಸಾಮಾಜಿಕ ಸ್ಥಿತ್ಯಂತರಗಳು ಮತ್ತು ಸಮಸ್ಯೆಗಳನ್ನು ಗಮನಿಸಿದಾಗ, ಕುವೆಂಪು ಅವರ 'ಮಂತ್ರಮಾಂಗಲ್ಯ' ಪರಿಕಲ್ಪನೆಯು ಒಂದು ಸೂಕ್ತ ಪರಿಹಾರವಾಗಿ ಕಾಣಿಸುತ್ತದೆ. ಈ ಕೊರೊನಾ ಕಾಲಘಟ್ಟದ ಸನ್ನಿವೇಶ ನೆನೆದರೆ ಈ ಮಂತ್ರಮಾಂಗಲ್ಯ ಹೆಚ್ಚು ಪ್ರಸ್ತುತ ಹಾಗೂ ಅವಶ್ಯಕವೆನಿಸುತ್ತದೆ. ಆದ್ದರಿಂದ ಈ ನೆಲೆಗಟ್ಟಿನಲ್ಲಿ ಬುದ್ಧ-ಬಸವ-ಕುವೆಂಪು ಅವರ ಕಲ್ಪನೆಯ ಸಮ ಹಾಗೂ ಸರಳ ಜೀವನದ ಉದ್ದೇಶವನ್ನು ಅರಿಯಲು ಈ ಒಂದು ಸಂಶೋಧನೆ ಅವಶ್ಯವೆನಿಸಿದೆ.

**ಅಧ್ಯಯನದ ಉದ್ದೇಶಗಳು:**

1. ಮಂತ್ರಮಾಂಗಲ್ಯದ ಆರ್ಥಿಕ ಪ್ರಸ್ತುತತೆಯನ್ನು ವಿಶ್ಲೇಷಿಸುವುದು.
2. ತೇಜಸ್ವಿಯವರ ವಿವಾಹದ ಸಾಮಾಜಿಕ ಪ್ರಭಾವವನ್ನು ಅಧ್ಯಯನ ಮಾಡುವುದು.

ಸಂಶೋಧನಾ ವಿಧಾನ: ಈ ಪ್ರಸ್ತುತ ಅಧ್ಯಯನಕ್ಕೆ ಪ್ರಮುಖವಾಗಿ ವಿವರಣಾತ್ಮಕ ಮತ್ತು ವಿಶ್ಲೇಷಣಾತ್ಮಕ ಸಂಶೋಧನಾ ವಿಧಾನವನ್ನು ಬಳಸಲಾಗಿದೆ. ಇದಕ್ಕೆ ಪೂರಕವಾದ ಮಾಹಿತಿಯನ್ನು ಕುವೆಂಪು ಅವರ ಮೂಲ ಕೃತಿಗಳು, ಲೇಖನಗಳು, ನಿಯತಕಾಲಿಕೆಗಳು ಹಾಗೂ ಅಂತರ್ಜಾಲದಂತಹ ದ್ವಿತೀಯಕ ಮೂಲಗಳಿಂದ ಸಂಗ್ರಹಿಸಲಾಗಿದೆ.

**ಮಂತ್ರಮಾಂಗಲ್ಯದ ಉಗಮ ಮತ್ತು ಹಿನ್ನೆಲೆ:**

ರಾಷ್ಟ್ರಕವಿ ಕುವೆಂಪು ಅವರು ತಾವು ಪ್ರತಿಪಾದಿಸಿದ 'ವಿಶ್ವಮಾನವ ತತ್ವ'ದ ಪ್ರಾಯೋಗಿಕ ಮತ್ತು ಕ್ರಾಂತಿಕಾರಿ ರೂಪವಾಗಿ 'ಮಂತ್ರಮಾಂಗಲ್ಯ' ಸರಳ ವಿವಾಹ ಪದ್ಧತಿಯನ್ನು ರೂಪಿಸಿದರು. ಸಾಂಪ್ರದಾಯಿಕ ಮದುವೆಗಳಲ್ಲಿದ್ದ ಪುರೋಹಿತಶಾಹಿ, ಜಾತೀಯತೆ, ವರದಕ್ಷಿಣೆ ಮತ್ತು ಸಾಲದ ಹೊರೆಯನ್ನು ನಿರಾಕರಿಸಿ, ವೈಚಾರಿಕ ಜೀವನ ಕ್ರಮವನ್ನು ಸಮಾಜಕ್ಕೆ ಪರಿಚಯಿಸುವುದು ಈ ಸಿದ್ಧಾಂತದ ಮುಖ್ಯ ಹಿನ್ನೆಲೆಯಾಗಿತ್ತು. ಈ ವೈಚಾರಿಕ ಪದ್ಧತಿಗೆ ಮೊದಲ ಪ್ರಾಯೋಗಿಕ ಚಾಲನೆ ಸಿಕ್ಕಿದ್ದು ಕುವೆಂಪು ಅವರ ಆಪ್ತ ಶಿಕ್ಷಕ ಹಾಗೂ ಹಿರಿಯ ವಿದ್ವಾಂಸರಾದ ತ.ಸು. ಶಾಮರಾಯರ ಮಗನ ಸರಳ ವಿವಾಹದ ಮೂಲಕ. ಸಾಮಾಜಿಕ ಮೈಲಿಗಲ್ಲು ಸಿಕ್ಕಿದ್ದು 1966 ನವೆಂಬರ್ 27 ರಂದು ಕುಪ್ಪಳಿಯಲ್ಲಿ ನಡೆದ ಕುವೆಂಪು ಅವರ ಪುತ್ರ ಪೂರ್ಣಚಂದ್ರ ತೇಜಸ್ವಿ ಹಾಗೂ ರಾಜೇಶ್ವರಿ ಅವರ ಅಂತರ್ಜಾತಿ ವಿವಾಹದ ಮೂಲಕ. ಮಹಾತ್ಮಾ ಗಾಂಧೀಜಿಯವರ ಸರಳತೆಯ ಸಿದ್ಧಾಂತದಿಂದ ಪ್ರಭಾವಿತರಾಗಿದ್ದ ಕುವೆಂಪು ಅವರು, ಯಾವುದೇ ಧಾರ್ಮಿಕ ಆಡಂಬರಗಳಿಲ್ಲದೆ ಸ್ವಂತ ಕುಟುಂಬದಲ್ಲೇ ಈ ವಿವಾಹ ನೆರವೇರಿಸಿ ಮಂತ್ರಮಾಂಗಲ್ಯದ ಆಶಯಗಳನ್ನು ಇತಿಹಾಸದಲ್ಲಿ ಸ್ಥಾಪಿಸಿದರು. ಇದು ಕರ್ನಾಟಕದ ಸಾಂಸ್ಕೃತಿಕ ವಲಯದಲ್ಲಿ ಮೂಢನಂಬಿಕೆ ಮುಕ್ತ ವಿವಾಹಗಳ ಕ್ರಾಂತಿಗೆ ಭದ್ರ ಬುನಾದಿ ಹಾಕಿತು (ನೋಡಿ: ಚಿತ್ರ ಅನುಬಂಧ–1).

**ಪೂರ್ಣಚಂದ್ರ ತೇಜಸ್ವಿ ಅವರ ವಿವಾಹ ಮತ್ತು ಸಾಮಾಜಿಕ ಪ್ರಭಾವ:**

ಕುವೆಂಪು ಅವರು 1976ರಲ್ಲಿ ರೂಪಿಸಿದ 'ವಿವಾಹ ಸಂಹಿತೆ' ಎಂಬ ನಿಯಮಾವಳಿಯ ಈ ವಿವಾಹವು ಅಂದಿನ ಕಾಲದ ಸಾಂಪ್ರದಾಯಿಕ ಮದುವೆಗಳಲ್ಲಿದ್ದ ಪುರೋಹಿತಶಾಹಿ, ಹೋಮ–ಹವನ, ಜಾತಕ, ಮುಹೂರ್ತ ಮತ್ತು ವರದಕ್ಷಿಣೆಯಂತಹ ಆಚರಣೆಗಳನ್ನು ಸಂಪೂರ್ಣವಾಗಿ ನಿರಾಕರಿಸಿತು. ಯಾವುದೇ ಸಂಸ್ಕೃತ ಮಂತ್ರಗಳಿಲ್ಲದೆ, ಕೇವಲ ವಧು–ವರರು ಕುವೆಂಪು ಅವರು ಸಿದ್ಧಪಡಿಸಿದ ಸರಳ ಕನ್ನಡದ ಒಡಂಬಡಿಕೆಯ ಪಠ್ಯವನ್ನು ಪರಸ್ಪರ ಪ್ರಮಾಣ ವಚನವಾಗಿ ಸ್ವೀಕರಿಸುವ ಮೂಲಕ ದಾಂಪತ್ಯ ಜೀವನಕ್ಕೆ ಕಾಲಿಟ್ಟರು. ಅತ್ಯಂತ ಆಪ್ತ ಬಂಧುಗಳು ಮತ್ತು ಪ್ರಗತಿಪರ ಚಿಂತಕರ ಸಮ್ಮುಖದಲ್ಲಿ ನಡೆದ ಈ ಆಡಂಬರರಹಿತ ವಿವಾಹವು, ವಾಣಿಜ್ಯೀಕರಣಗೊಳ್ಳುತ್ತಿದ್ದ ದುಬಾರಿ ಮಾರುಕಟ್ಟೆ ಸಂಸ್ಕೃತಿಗೆ ನೀಡಿದ ಮೊದಲ ವೈಚಾರಿಕ ಪೆಟ್ಟಾಗಿತ್ತು.

**ಉಂಟಾದ ಸಾಮಾಜಿಕ ಪ್ರಭಾವ:** ತೇಜಸ್ವಿ ಅವರ ಈ ಕ್ರಾಂತಿಕಾರಿ ಹೆಜ್ಜೆಯು ಅಂದಿನ ಕರ್ನಾಟಕದ ಯುವ ಪೀಳಿಗೆಯಲ್ಲಿ ಹೊಸ ಸಂಚಲನವನ್ನು ಸೃಷ್ಟಿಸಿತು. ವಿಶೇಷವಾಗಿ ಸಮಾಜವಾದಿ ಚಳವಳಿ ಮತ್ತು ವೈಚಾರಿಕ ಚಿಂತನೆಗಳಿಂದ ಪ್ರಭಾವಿತರಾಗಿದ್ದ ಯುವಕರಿಗೆ ಇದು ದೊಡ್ಡ ಪ್ರೇರಣೆಯಾಯಿತು. ಈ ವಿವಾಹದ ಯಶಸ್ಸಿನ ನಂತರ, ಕರ್ನಾಟಕದ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ವಲಯದಲ್ಲಿ 'ಸರಳ ಮತ್ತು ಪ್ರಗತಿಪರ ವಿವಾಹ'ಗಳ ಅಗತ್ಯತೆಯ ಕುರಿತು ವ್ಯಾಪಕ ಚರ್ಚೆಗಳು

ಆರಂಭವಾದವು. ಜಾತಿ ವ್ಯವಸ್ಥೆಯ ಗೋಡೆಗಳನ್ನು ಮುರಿದು ನೂರಾರು ಅಂತರ್ಜಾತಿ ವಿವಾಹಗಳು ಮಂತ್ರಮಾಂಗಲ್ಯ ಪದ್ಧತಿಯಡಿ ನಡೆಯಲು ಇದು ಮುನ್ನುಡಿಯಾಯಿತು. ಇಂದಿಗೂ ಕುಪ್ಪಳಿಯ ಕುವೆಂಪು ನಿವಾಸದ ಆವರಣವು (ಹೇಮಾಂಗಣ) ಇಂತಹ ನೂರಾರು ಪ್ರಗತಿಪರ ಜೋಡಿಗಳ ಮಂತ್ರಮಾಂಗಲ್ಯ ವಿವಾಹಕ್ಕೆ ಸಾಕ್ಷಿಯಾಗುತ್ತಾ, ಒಂದು ಜೀವಂತ ಸಾಮಾಜಿಕ ಚಳವಳಿಯಾಗಿ ಮುಂದುವರಿದಿದೆ.

**ಕೋವಿಡ್ ನಂತರದ ಪ್ರಭಾವ:** ಪ್ರಸ್ತುತ 21ನೇ ಶತಮಾನದಲ್ಲಿ ರಾಷ್ಟ್ರಕವಿ ಕುವೆಂಪು ಹಾಗೂ ಪೂರ್ಣಚಂದ್ರ ತೇಜಸ್ವಿ ಅವರ ವೈಚಾರಿಕ ಚಿಂತನೆಗಳಿಂದ ಪ್ರಭಾವಿತರಾದ ವಿದ್ಯಾವಂತ ಯುವ ಪೀಳಿಗೆಯು, ಸಾಂಪ್ರದಾಯಿಕ ಆಚರಣೆಗಳನ್ನು ಬದಿಗಿಟ್ಟು ಜಾತ್ಯತೀತ ಹಾಗೂ ಸರಳ ವಿವಾಹ ಪದ್ಧತಿಯನ್ನು ಹೆಮ್ಮೆಯಿಂದ ಅಪ್ಪಿಕೊಳ್ಳುತ್ತಿದೆ. ಈ ನಿಟ್ಟಿನಲ್ಲಿ ಇತ್ತೀಚಿನ ದಿನಗಳಲ್ಲಿ ಸಾಮಾಜಿಕ ಜಾಲತಾಣಗಳಲ್ಲಿ ವ್ಯಕ್ತವಾಗುತ್ತಿರುವ ಸಕಾರಾತ್ಮಕ ಪ್ರಭಾವಗಳು ಗಮನಾರ್ಹವಾಗಿವೆ (ನೋಡಿ: ಚಿತ್ರ ಅನುಬಂಧ–2). ವಿಶೇಷವಾಗಿ, ಕೋವಿಡ್–19 ರ ಕಾಲಘಟ್ಟದಲ್ಲಿ ಉಂಟಾದ ಆರ್ಥಿಕ ಸ್ಥಿತ್ಯಂತರಗಳು ಮತ್ತು ಸರ್ಕಾರದ ಸಾಮಾಜಿಕ ಅಂತರದ ನಿಯಮಗಳು ಸಾರ್ವಜನಿಕರನ್ನು ಸರಳ ವಿವಾಹಗಳತ್ತ ಮುಖಮಾಡುವಂತೆ ಪ್ರೇರೇಪಿಸಿದವು; ಈ ಸಂದರ್ಭದಲ್ಲಿ ಮಂತ್ರಮಾಂಗಲ್ಯದ ಪ್ರಸ್ತುತತೆ ಮತ್ತಷ್ಟು ವಿಸ್ತಾರಗೊಂಡಿತು. ಹಿಂದೆ ಕೇವಲ ಅಂತರ್ಜಾತಿ ಮತ್ತು ಪ್ರೇಮ ವಿವಾಹಗಳಿಗೆ ಮಾತ್ರ ಸೀಮಿತವೆಂದು ಭಾವಿಸಲಾಗಿದ್ದ ಈ ಪದ್ಧತಿಯನ್ನು, ಇಂದಿನ ಪ್ರಜ್ಞಾವಂತ ಯುವ ಪೀಳಿಗೆಯು ಪೋಷಕರ ಒಪ್ಪಿಗೆಯೊಂದಿಗೆ ಸ್ವಇಚ್ಛೆಯಿಂದ ಸ್ವೀಕರಿಸುತ್ತಿದೆ. ಕುವೆಂಪು ಅವರು ಆಶಿಸಿದಂತೆ, "ಯಾವ ಶಾಸ್ತ್ರ ಏನು ಹೇಳಿದರೇನು, ಎದೆಯ ದನಿಗಿಂತ ಬೇರೆ ಮಿಗಿಲಾದ ಶಾಸ್ತ್ರ ಇಹುದೇನು" ಎಂಬ ವೈಚಾರಿಕ ಧ್ವನಿಯೊಂದಿಗೆ ಕುಪ್ಪಳಿಯ ಕವಿಶೈಲ, ಜಾನಪದ ಲೋಕ ಹಾಗೂ ರಂಗಭೂಮಿ ವೇದಿಕೆಗಳಲ್ಲಿ ದುಂದುವೆಚ್ಚವಿಲ್ಲದೆ ಮದುವೆಗಳು ನೆರವೇರುತ್ತಿವೆ. ಈ ಮೂಲಕ ಬುದ್ಧ, ಬಸವ, ಗಾಂಧಿ ಮತ್ತು ಕುವೆಂಪು ಅವರ ವಿಚಾರ ಕ್ರಾಂತಿಯು ಜನರನ್ನು ಮೂಢನಂಬಿಕೆಗಳಿಂದ ಮುಕ್ತಗೊಳಿಸಿ, ಆರ್ಥಿಕ ಹಾಗೂ ಸಾಮಾಜಿಕವಾಗಿ ಸದೃಢಗೊಳಿಸುವ ಮೂಲಕ 'ವಿಶ್ವಮಾನವ' ಪ್ರಜ್ಞೆಯನ್ನು ಜಾಗೃತಗೊಳಿಸುತ್ತಿರುವುದು ಇಂದಿನ ಸಮಾಜಕ್ಕೆ ಅತ್ಯಂತ ಅನಿವಾರ್ಯವಾಗಿದೆ.

**ಉಪಸಂಹಾರ:**

ಕುವೆಂಪು ಅವರು ಸಾರಿದ 'ವಿಶ್ವಮಾನವ ತತ್ವ'ದ ಪ್ರಾಯೋಗಿಕ ಮತ್ತು ಕ್ರಾಂತಿಕಾರಿ ರೂಪವೇ 'ಮಂತ್ರಮಾಂಗಲ್ಯ' ವಿವಾಹ ಪದ್ಧತಿಯಾಗಿದೆ. ಪ್ರಸ್ತುತ 21ನೇ ಶತಮಾನದ ಗ್ರಾಹಕ ಸಂಸ್ಕೃತಿಯ ಜಗತ್ತಿನಲ್ಲಿ ಮದುವೆಗಳು ಕೇವಲ ದುಬಾರಿ ಮಾರುಕಟ್ಟೆಯಾಗಿ ಬದಲಾಗುತ್ತಿರುವಾಗ, ಮಂತ್ರಮಾಂಗಲ್ಯದ ಆಶಯಗಳು ಇಂದಿನ ಯುವ ಪೀಳಿಗೆಗೆ ಅತ್ಯಂತ ಅವಶ್ಯಕ ಮತ್ತು ಪ್ರಸ್ತುತ ಎನಿಸುತ್ತವೆ. ಇದು ಕೇವಲ ಸಾಂಪ್ರದಾಯಿಕ ಆಚರಣೆಗಳ ಬದಲಾವಣೆಯಲ್ಲ, ಬದಲಿಗೆ ಆರ್ಥಿಕ ಶೋಷಣೆ,

ಜಾತೀಯತೆ ಮತ್ತು ಲಿಂಗ ಅಸಮಾನತೆಯ ವಿರುದ್ಧದ ಸಾಮಾಜಿಕ ಕ್ರಾಂತಿಯಾಗಿದೆ.

## ಪರಾಮರ್ಶನ ಗ್ರಂಥಗಳು:


1. ಕುವೆಂಪು, (1976), ವಿವಾಹ ಸಂಹಿತೆ (ಮಂತ್ರಮಾಂಗಲ್ಯ), ಮೈಸೂರು: ಉದಯರವಿ ಪ್ರಕಾಶನ.
2. ಪೂರ್ಣಚಂದ್ರ ತೇಜಸ್ವಿ, (2002), ಅಣ್ಣನ ನೆನಪು, ಮೈಸೂರು: ಪುಸ್ತಕ ಪ್ರಕಾಶನ.
3. ರಾಜೇಶ್ವರಿ ತೇಜಸ್ವಿ, (2012), ನಮ್ಮ ಮನೆ ಮೂಡಿಗೆರೆ, ಬೆಂಗಳೂರು: ಅಂಕಿತ ಪುಸ್ತಕ.
4. ಕಣಜ ಪೋರ್ಟಲ್, (2026), ಮಂತ್ರಮಾಂಗಲ್ಯ ವಿವಾಹ ಸಂಹಿತೆ ಮತ್ತು ಆಶಯಗಳು, ಬೆಂಗಳೂರು: ಕರ್ನಾಟಕ ಸರ್ಕಾರ.


## ಅನುಬಂಧ –1



ತೇಜಸ್ವಿ ಅವರ ಮಂತ್ರಮಾಂಗಲ್ಯ.



**Mantra Mangalya: Simple marriage ritual designed by Kannada poet Kuvempu more relevant than ever**

It is a wedding ceremony that did away with not only unnecessary expenses but also reliance on Brahminical rituals

January 05, 2024 09:00 am | Updated 10:33 am IST - Shivamogga

G T SATHISH

Noted playwright Girish Karnad administered the oath as per Mantra Mangalya to Kaneena Kadidal and Deepika of Tirthahalli. | Photo Credit: SPECIAL ARRANGEMENT

Kadidal Manjappa was the Chief Minister of Karnataka for a brief period in 1956. All through his political career, he must have faced several protests, but the one he faced in his native village ahead of the marriage of his two nieces was unique.

ಜ್ಞಾನಪೀಠ ಪುರಸ್ಕೃತ ಲೇಖಕರಾದ ಗಿರೀಶ್ ಕಾರ್ನಾಡ್ ಅವರು ಪ್ರತಿಜ್ಞಾ ವಿಧಿ ಹೇಳುತ್ತಿರುವುದು.

## ಅನುಬಂಧ-2

## ಸಾಮಾಜಿಕ ಜಾಲತಾಣಗಳಲ್ಲಿ ಸಿಕ್ಕ ಕೋವಿಡ್ ನಂತರದ ಮಂತ್ರಮಾಂಗಲ್ಯ ಮದುವೆ ಚಿತ್ರಗಳು. ಸಾಮಾನ್ಯರಿಂದ ಸಮಾಜದ ಗಣ್ಯರವರೆಗೆ ಇದನ್ನು ಅನುಸರಿಸುತ್ತಿರುವುದು.



**ಇತ್ತೀಚೆಗಷ್ಟೇ** ಸರಿಗಮಪ ಖ್ಯಾತಿಯ ಗಾಯಕಿ ಸುಹಾನಾ ಸಯ್ಯದ್ (Suhaana Syed) ತಾವು ಪ್ರೀತಿಸುತ್ತಿರುವ ಹುಡುಗನ ಪರಿಚಯ ಮಾಡಿಕೊಟ್ಟಿದ್ದರು. 16 ವರ್ಷಗಳಿಂದ ಪ್ರೀತಿಸುತ್ತಿರುವ ನಿತಿನ್ ಹೆಸರಿನ ರಂಗಭೂಮಿ ಕಲಾವಿದನ ಜೊತೆ ಸುಹಾನಾ ಮದುವೆಯಾಗುತ್ತಿದ್ದು ಮದುವೆಯಲ್ಲಿ ವಿಶ್ವಮಾನವತ್ವದ ಧೋರಣೆ ಮೆರೆಯಲು ಹೊರಟಿದ್ದಾರೆ.












